**ಕರ್ನಾಟಕ ಸರ್ಕಾರ**

ಸಂಖ್ಯೆ:ಲೋಇ:621:ಆಕೋ-3/2003

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 27.12.2003.

**ಸುತ್ತೋಲೆ**

**ವಿಷಯ :** ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಪೂರ್ವಲೆಕ್ಕ ಪರಿಶೋಧನೆ (Preaudit) ವ್ಯವಸ್ಥೆ ಮಾಡುವ ಬಗ್ಗೆ.

**ಉಲ್ಲೇಖ:** ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ.19.ಬಿಪಿಎ.2002 ದಿನಾಂಕ 27.11.2002.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳಲ್ಲಿ ಪ್ರತಿ ವರ್ಷ ಕಛೇರಿ ಸಾಧನ ಸಾಮಗ್ರಿಗಳು, ಯಂತ್ರೋಪಕರಣಗಳು, ಔಷಧಿಗಳು ಇತ್ಯಾದಿಗಳನ್ನು ಖರೀದಿಸುವಾಗ ಕ.ಸಾ.ಸಂ.ಪಾ.ಅಧಿನಿಯಮ 1999 ಹಾಗೂ, ನಿಯಮಗಳು 2000 ರೀತ್ಯ ಖರೀದಿ ಪ್ರಕ್ರಿಯಾ ಕೈಗೊಳ್ಳಬೇಕಿದ್ದು, ತತ್ಸಂಬಂಧವಾದ ಟೆಂಡರ್ ಪ್ರಕ್ರಿಯೆಯಲ್ಲಿ ಟೆಂಡರ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದೆಯೇ? ಟೆಂಡರ್ ಬಿಡ್ಡುಗಳನ್ನು ಸರಿಯಾಗಿ ಒಪ್ಪಿಕೊಳ್ಳಲಾಗಿದೆಯೇ ಅಥವಾ ತಿರಸ್ಕರಿಸಲಾಗಿದೆಯೇ, ಇತ್ಯಾದಿ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲು, ಹಾಗೂ ಖರೀದಿ ನಿಯಮಗಳಲ್ಲಿ ಲೋಪದೋಷ ಉಂಟಾಗದಂತೆ, ಲೆಕ್ಕಪತ್ರ ಇಲಾಖೆಯ ಮುಖಾಂತರ ಪೂರ್ವಲೆಕ್ಕ ಪರಿಶೋಧನೆ (pre-audit) ವ್ಯವಸ್ಥೆ ಜಾರಿಗೊಳಿಸುವಂತೆ ಎಲ್ಲಾ ಇಲಾಖೆಗಳಿಗೆ ತಿಳಿಸಲಾಗಿತ್ತು.

ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಲಾಗಿದೆ. ಈ ಸಂಬಂಧ ರಾಜ್ಯ ಲೆಕ್ಕಪತ್ರ ಇಲಾಖೆಯು, ಲಭ್ಯ ಸೀಮಿತ ಸಿಬ್ಬಂದಿಯಿರುವ ಕಾರಣ, ಪೂರ್ವಲೆಕ್ಕ ಪರಿಶೋಧನೆ (pre-audit) ಕಾರ್ಯವನ್ನು ಎಲ್ಲಾ ಇಲಾಖೆಗಳಲ್ಲಿ ಕೈಗೊಳ್ಳಲು ಸಾಧ್ಯವಿಲ್ಲವೆಂದು ಆರ್ಥಿಕ ಇಲಾಖೆ ಮನಗಂಡಿದೆ. ಆದರೆ ಇಲಾಖಾ ಮುಖ್ಯಸ್ಥರು ಮತ್ತು ಇಲಾಖಾ ಕಾರ್ಯದರ್ಶಿಗಳು ಪೂರ್ವಲೆಕ್ಕ ಪರಿಶೋಧನೆ ಅಗತ್ಯವೆಂದು ತಿಳಿಸಿರುವ ಪ್ರಯುಕ್ತ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವ ವಿಷಯವನ್ನು ಗಮನದಲ್ಲಿರಿಸಿಕೊಂಡು ಪೂರ್ವಲೆಕ್ಕ ಪರಿಶೋಧನೆ (pre-audit) ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿದೆ.

ಇಲಾಖೆಗಳಲ್ಲಿ (ಲೋಕೋಪಯೋಗಿ, ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆ ಹೊರತುಪಡಿಸಿ) ಯಾವುದೇ ಸರಕು ಸಂಗ್ರಹನೆಯ ಕಾಮಗಾರಿಯ ಮೌಲ್ಯವು ರೂ.1.00 ಕೋಟಿಗಿಂತ ಮೀರಿದ್ದಲ್ಲಿ ಹಾಗೂ ಲೋಕೋಪಯೋಗಿ, ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ರೂ.5.00 ಕೋಟಿಗಳಿಗಿಂತ ಮೀರಿದ್ದಲ್ಲಿ ಕ.ಸಾ.ಸಂ.ಪಾ.ನಿಯಮದ ನಿಯಮ ಸಂಖ್ಯೆ 20ರನ್ವಯ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸತಕ್ಕದೆಂದು ಸೂಚಿಸಲಾಗಿದೆ. ಈ ಸಮಿತಿಯಿಂದ ಟೆಂಡರ್ ಪರಿಶೀಲನೆಯ ನಂತರ ಅದರ ಶಿಫಾರಸ್ಸಿನೊಂದಿಗೆ ಅವಶ್ಯಕತೆ ಕಂಡುಬಂದಲ್ಲಿ ಪೂರ್ವ ಲೆಕ್ಕ ಪರಿಶೋಧನೆಗಾಗಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸುವುದು. ಪ್ರಸ್ತಾವನೆಯ ಪರಿಶೀಲನೆಯ ನಂತರ ಪೂರ್ವಲೆಕ್ಕ ಪರಿಶೋಧನೆ (pre-audit) ಅವಶ್ಯಕತೆ ಎಂದು ಕಂಡುಬಂದಲ್ಲಿ, ಈ ಬಗ್ಗೆ ಆರ್ಥಿಕ ಇಲಾಖೆಯಿಂದ ಸೂಕ್ತ ಆದೇಶ ನೀಡಲಾಗುವುದು ಎಂದು ತಿಳಿಸಲಾಗಿದೆ. ಈ ಸೂಚನೆಗಳನ್ನು ತಮ್ಮ ಅಧೀನದಲ್ಲಿ ಎಲ್ಲಾ ಇಲಾಖೆಗಳಿಗೆ ನೀಡಬೇಕೆಂದು ಸಹ ಕೋರಲಾಗಿದೆ.

ಬಿ.ಕೆ ದಾಸ್
ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರ್ಥಿಕ ಇಲಾಖೆ.